ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಸೋಮವಾರ, ದಿನಾಂಕ : 01 ನೇ ಫೆಬ್ರುವರಿ, 2021

ತಳಿ ಸಂವರ್ಧನೆ ಯೋಜನೆಯ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

154 (138) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ 5 ವರ್ಷಗಳಲ್ಲಿ ತಳಿ ಸಂವರ್ಧನೆ ಯೋಜನೆಯ ಅನ್ವಯ ಎಷ್ಟು ಪ್ರಾಣಿಗಳ ತಳಿ ಸಂವರ್ಧನೆ ನಡೆಸಲಾಗಿದೆ; ಇದಕ್ಕಾದ ವೆಚ್ಚವೆಷ್ಟು;

(ಆ) ಮೃಗಾಲಯದ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಇದುವರೆಗೆ ಎಷ್ಟು ಖಾಸಗಿ ಸಂಸ್ಥೆಗಳು ಮೃಗಾಲಯದ ನಿರ್ವಹಣೆ ನಡೆಸುತ್ತಿವೆ; ಅವು ಯಾವುವು;

(ಇ) ಬನ್ನೇರುಘಟ್ಟ ಜೈವಿಕ ಉದ್ಯಾನವನದ ಕರಡಿ ರಕ್ಷಣಾ ಕೇಂದ್ರವನ್ನು ಯಾರು ನಿರ್ವಹಿಸುತ್ತಿದ್ದಾರೆ; ಸರ್ಕಾರೇತರ ಸಂಸ್ಥೆಗೆ ನಿರ್ವಹಣೆಗೆ ನೀಡಿದ್ದಲ್ಲಿ, ಯಾವ ಆಧಾರದ ಮೇಲೆ ನೀಡಲಾಗಿದೆ; ಈ ಸಂಸ್ಥೆಯು ಸರ್ಕಾರಕ್ಕೆ ಎಷ್ಟು ಮೊತ್ತವನ್ನು ಪಾವತಿಸುತ್ತಿದೆ; ಸರ್ಕಾರವೇ ನಿರ್ವಹಣಾ ವೆಚ್ಚವನ್ನು ಭರಿಸುವುದಾದಲ್ಲಿ ಖಾಸಗಿ ಸಂಸ್ಥೆಗೆ ನಿರ್ವಹಣೆಗೆ ನೀಡಲು ಕಾರಣವೇನು ?